ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ ತಿ.ನರಸೀಪುರ.

**ಸಿ ಸಿ ನಂ. 782/ 2014**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | ಃ | ನಾಗರಾಜು | ಪಿ ಡಬ್ಲ್ಯೂಃ | 10 |
| ತಂದೆಯ / ಗಂಡನ ಹೆಸರು | ಃ | ಬಸವಣ್ಣ | ಸಿ ಡಬ್ಲ್ಯೂಃ | 8 |
| ವಯಸ್ಸು | ಃ | 55 ವರ್ಷ | ಡಿ ಡಬ್ಲ್ಯೂಃ | |
| ಉದ್ಯೋಗ | ಃ | ಕೂಲಿ ಕೆಲಸ | ಆರ್ ಡಬ್ಲ್ಯೂಃ | |
| ವಾಸಸ್ಥಳ | ಃ | ಕಾಳೀಹುಂಡಿ ಗ್ರಾಮ | ಪ್ರ.ವ.ಬೋ. ದಿಃ 05.03.2018 | |

ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ

ಮುಡುಕುತೊರೆ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ನಾನು ದುರ್ಗಾಂಬ ದೇವಸ್ಥಾನದಲ್ಲಿ ಅರ್ಚಕನಾಗಿ 5 ವರ್ಷ ಕೆಲಸ ಮಾಡುತ್ತಿದ್ದೆ. 5 ವರ್ಷದ ಹಿಂದೆ ನಾನು ಇತರ ಅರ್ಚಕರಾದ ನಾಗರಾಜು, ನಾಗರಾಜಪ್ಪ, ಬಸವಣ್ಣ ನಾವೆಲ್ಲರೂ ಸೇರಿ ಕಾವಲುಗಾರರಾದ ಮರಿಸ್ವಾಮಿ, ಮಲ್ಲಿಕಾರ್ಜುನ ಸ್ವಾಮಿ ಇನ್ನೊಬ್ಬ ಮಲ್ಲಿಕಾರ್ಜುನ ರವರಿಗೆ ಊಟವನ್ನು ಹಾಕಿ ದೇವಸ್ಥಾನದ ಹಿಂಭಾಗ ಮಲಗಿದೇವು. ಬೆಳಿಗ್ಗೆ ಜಾವ 4.30 ಕ್ಕೆ ಕಾವಲುಗಾರರು ಬಂದು ನಮ್ಮನ್ನು ಏಳಿಸಿದರು. ಅಮ್ಮನವರ ದೇವಸ್ಥಾನ ಬೀಗವನ್ನು ಮುರಿಯಲಾಗಿದೆ ಎಂದು ಹೇಳಿದರು. ನಂತರ ನಾವು ಹೋಗಿ ನೋಡಿದಾಗ ಗೋಲಕ ಹೊಡೆದು ಹಾಕಲಾಗಿತ್ತು. ಈ ವಿಚಾರವನ್ನು ರಾಜಶೇಖರ ಮೂರ್ತಿ ರವರಿಗೆ (ಚಾಸಾ1) ತಿಳಿಸಿರುತ್ತಾರೆ. ಅವರು ಪೋಲಿಸರಿಗೆ ದೂರನ್ನು ನೀಡಿರುತ್ತಾರೆ. ಈ ಬಗ್ಗೆ ಪೋಲಿಸರಿಗೆ ಹೇಳಿಕೆಯನ್ನು ನೀಡಿರುವುದಿಲ್ಲ. ದೇವಸ್ಥಾನದಲ್ಲಿ ಏನೆಲ್ಲಾ ಕಳವಾಗಿದೆ ಈ ಬಗ್ಗೆ ಯಾವುದೇ ವಿಚಾರ ನನಗೆ ಗೊತ್ತಿಲ್ಲ ಯಾರು ಕಳವು ಮಾಡಿರುತಾರೆ ಮತ್ತು ಏನೆಲ್ಲಾ ವಸ್ತುಗಳು ಸಿಕ್ಕಿರುತ್ತವೆ ಈ ಬಗ್ಗೆ ನನಗೆ ಗೊತ್ತಿಲ್ಲ ಈ ಬಗ್ಗೆ ಪೋಲಿಸರಿಗೆ ಮರು ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಅನುಮತಿ ಕೋರಿದ್ದು, ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ನುಡಿದಿದ್ದು, ಅನುಮತಿ ನೀಡಿದೆ)

ಪಾಟೀ ಸವಾಲುಃ ಎಪಿಪಿ ರವರಿಂದಃ

ದಿನಾಂಕ 23.10.2013 ರಂದು ದೇವಸ್ಥಾನದಲ್ಲಿ ಕಳವಾಗಿದೆ ಎಂದು ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಭಾಗಶಃ ಹೇಳಿಕೆಯನ್ನು ನಿಪಿ8 ಎಂದು ಗುರುತಿಸಲಾಯಿತು. ದೇವಸ್ಥಾನದಲ್ಲಿ ಕಳವಾದ ವಿಚಾರವನ್ನು ಚಾಸಾ 4 ರವರು ದೂರವಾಣಿ ಮೂಲಕ ಚಾಸಾ 1 ರವರಿಗೆ ತಿಳಿಸಿದರು ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ದಿನಾಂಕ 15.09.2014 ರಂದು ಗೋಲಕವನ್ನು ಹೊಡೆದು ಅದರಲ್ಲಿದ್ದ ಹಣವನ್ನು ಕಳ್ಳತನ ಮಾಡಿದ್ದು

ಭಕ್ತಾದಿಗಳು ಹಾಕಿದ್ದ ಗೋಲಕದ ಹಣವಾದ್ದರಿಂದ ಎಷ್ಟು ಹಣ ಇತ್ತು ಹಾಗೂ ಇತರೆ ವಸ್ತುಗಳು ಏನೇನಿತ್ತು ಎಂಬುದು ತಿಳಿದಿರಲಿಲ್ಲ ಗೋಲಕದ ಹಣ ಕಳುವಾಗಿದ್ದರ ಬಗ್ಗೆ ದೇವಸ್ಥಾನದ ಕಾರ್ಯನಿರ್ವಹಣ ಅಧಿಕಾರಿಗಳಾದ ರಾಜಶೇಖರ ಮೂರ್ತಿ ರವರು ಪೊಲಿಸರಿಗೆ ದೂರು ನೀಡಿದ್ದು ಈ ಬಗ್ಗೆ ಕೇಸು ದಾಖಲಾಗಿರುವುದು ಸರಿಯಷ್ಟೆ

ದಿನಾಂಕ 23.10.2013 ರಂದು ರಾತ್ರಿ ಅಮ್ಮನವರ ದೇವಸ್ಥಾನದ ಗೋಲಕವನ್ನು ಕಳ್ಳತನ ಮಾಡಿದ್ದ ವ್ಯಕ್ತಿಯನ್ನು ಮದ್ದೂರು ಪೋಲಿಸರ್ ಠಾಣೆಯ ದಸ್ತಗಿರಿಮಾಡಿದ್ದು ಆತನ ಹೆಸರು ಕೆ ಮಣಿಕಂಠ ಬಿನ್ ಕೆಂಗಲ್ ಶೆಟ್ಟಿ ಎಂದು ಆತನು ದೇವಸ್ಥಾನದ ಗೋಲಕದಲ್ಲಿ ಕಳವು ಮಾಡಿದ್ದ 13,000/- ರೂ ನಗದು ಹಣ ಹಾಗೂ ಸುಮಾರು 23 ಗ್ರಾಂ ತೂಕದ ಲಕ್ಷ್ಮೀ ಚಿತ್ರವಿರುವ 23 ಚಿನ್ನದ ಕಾಸುಗಳನ್ನು ವಶಪಡಿಸಿಕೊಂಡು ತಲಕಾಡು ಪೊಲೀಸ್ ಠಾಣೆಗೆ ವರ್ಗಾವಣೆ ನೀಡಿರುವ ವಿಚಾರ ತಲಕಾಡು ಪೋಲಿಸರಿಂದ ತಿಳಿಯಿತು ಎಂದು ನನ್ನ ಮರು ಹೇಳಿಕೆಯಲ್ಲಿ ನೀಡಿದ್ದೇನೆ ಎಂದರ ಸರಿಯಲ್ಲ ಸದರಿ ಹೇಳಿಕೆಯನ್ನು ನಿಪಿ-9 ಎಂದು ಗುರುತಿಸಲಾಯಿತು, ದೇಸ್ಥಾನದಲ್ಲಿ 13 ಸಾವಿರ ಮತ್ತು 23 ಚಿನ್ನದ ಕಾಸುಗಳನ್ನು ಆರೋಪಿಯು ದೇವಸ್ಥಾನದಲ್ಲಿ ಕಳವು ಮಾಡಿದ್ದರೂ ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಆರ್ ಆರ್ ವಕೀಲರು ಗೈರು ಹಾಜರಾಗಿರುತ್ತಾರೆ ಆರೋಪಿಯು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆಃ ಇಲ್ಲ.

ಓ ಹೇ ಕೇ ಸ ಇದೆ.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ತಿ.ನರಸೀಪುರ.